ಸಿ.ಸಿ ನಂಬ್ರ: 1514/2023
ಪಿ.ಡಬ್ಲ್ಯೂ ಃ 1

ದಿನಾಂಕಃ 25 -11-2024 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಗಿದೆ

ಪಾಟೀ ಸವಾಲು ಃ ಆರೋಪಿ ಪರ ಶ್ರೀ ಎಮ್. ಎಮ್ .ಎಚ್. ವಕೀಲರಿಂದ

1. ನಮ್ಮ ಸೊಸೈಟಿಯ ಇರುವುದು ಕುಂದಾಪುರದಲ್ಲಿ. ನಾನು ಕುಂದಾಪುರದಲ್ಲಿ ವಾಸವಿರುತ್ತೇನೆ. ಪಿರ್ಯಾದಿದಾರರ ಸೊಸೈಟಿಯಲ್ಲಿ 15 ಜನ ಡೈರೆಕ್ಟರ್ ಇರುತ್ತಾರೆ. ಯಾವುದೇ ಕಾನೂನು ಪ್ರಕ್ರೀಯಾ ತೆಗೆದುಕೊಳ್ಳಬೇಕಾದರೆ ಠರಾವು ಆಗಬೇಕು ಎಂದರೆ ಸರಿ. ಈ ಪ್ರಕರಣದಲ್ಲಿ ನಾನು ಸಾಕ್ಷಿ ನುಡಿಯಲು ಠರಾವು ಆಗಿರುತ್ತದೆ. ದಿನಾಂಕ 10-05-2021 ರಂದು ಠರಾವು ಆಗಿರುತ್ತದೆ. ಟರಾವು ಮುಖ್ಯ ಕಚೇರಿಯಲ್ಲಿ ಆಗಿರುತ್ತದೆ. ಆರೋಪಿತ ವಿರುದ್ಧ ದೂರು ದಾಖಲಿಸಲು ಸಲುವಾಗಿ ಠರಾವು ಆಗಿರುತ್ತದೆ. ಠರಾವಿನ ಆಧಾರದ ಮೇಲೆ ಈ ದೂರನ್ನು ದಾಖಲಿಸಿರುತ್ತೇನೆ. ಆ ಠರಾವನ್ನು ವಕೀಲರಿಗೆ ಕೊಟ್ಟಿರುವುದಿಲ್ಲ. ಸದರಿ ಪ್ರಕರಣವನ್ನು ಸಂಸ್ಥೆಯ ಪರವಾಗಿ ಹಾಕಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತ ವಿರುದ್ಧ ದೂರು ದಾಖಲಿಸಲು ಯಾವುದೇ ಠರಾವು ಇರುವುದಿಲ್ಲ ಎಂದರೆ ಸರಿಯಲ್ಲ.

2. ಸೊಸೈಟಿಯಿಂದ ಸಾಲ ಪಡೆಯಬೇಕಾದರೆ ನಮ್ಮ ಸೊಸೈಟಿಯಲ್ಲಿ ಸದಸ್ಯರಾಗಬೇಕು. ಯಾವ ದಿನಾಂಕದಂದು ಆತ ಸದಸ್ಯನಾಗಿರುತ್ತಾನೆ ಎಂದು ನೆನಪಿರುವುದಿಲ್ಲ. ಸದಸ್ಯರಾಗಿ 1 ವರ್ಷದ ನಂತರ ಸಾಲ ಕೊಡಲಾಗಿರುತ್ತದೆ. ಬ್ಯಾಂಕ್ ನಿಂದ ಸಾಲ ಪಡೆಯುವಾಗ ಫ್ರಾಮಿಸರಿ ನೋಟ್ ಹಾಗೂ ಟೇಕ್ ಡೆಲಿವರಿ ಲೆಟರ್ ನ್ನು ತೆಗೆದುಕೊಳ್ಳುತ್ತೇವೆ. ಸಾಮಾನ್ಯವಾಗಿ ಸಾಲ ಕೊಡುವಾಗ ಸ್ಥಿರಾಸ್ತಿಯನ್ನು ಜಾಮೀನಾಗಿ ತೆಗೆದುಕೊಳ್ಳುತ್ತೇವೆ ಎಂದರೆ ಸರಿ. ಸೆಕ್ಯೂರಿಟಿಯ ಉದ್ದೇಶಕ್ಕಾಗಿ ಸ್ಥಿರಾಸ್ತಿಯನ್ನು ಜಾಮೀನಾಗಿ ತೆಗೆದುಕೊಳ್ಳುತ್ತೇವೆ ಎಂದರೆ ಸರಿ. ಸಾಕ್ಷಿ ಸಣ್ಣ ಮೊತ್ತ ಆದ್ದರಿಂದ ಸ್ಥಿರಾಸ್ತಿಯ ಭದ್ರತೆಯನ್ನು ತೆಗೆದುಕೊಂಡಿಲ್ಲ ಎಂದು ನುಡಿಯುತ್ತಾರೆ.

3.ಸಣ್ಣ ಮೊತ್ತದ ವ್ಯಯಕ್ತಿಕ ಸಾಲವನ್ನು ಇಂತಿಷ್ಟು ಕೊಡಬೇಂದು ಇರುತ್ತದೆ, ಅದಕ್ಕೆ ಸ್ಥಿರಾಸ್ತಿಯ ಭದ್ರತೆಯನ್ನು ತೆಗೆದುಕೊಳ್ಳುವುದಿಲ್ಲ ಎಂದು ನುಡಿಯುತ್ತಾರೆ. ಮಾರ್ಚ್ 31, 2021 ಆರೋಪಿತನಿಗೆ ಸಾಲ ಕೊಟ್ಟಿರುತ್ತೇವೆ. ಸಾಲ ಕೊಟ್ಟ ಬಗ್ಗೆ ಪಾಮಿಸರಿ ನೋಟ್, ಸಾಲದ ಅರ್ಜಿ, ಟೇಕ್ ಡೆಲಿವರಿ ಲೆಟರ್ ಎಲ್ಲ ಇರುತ್ತದೆ. 65 ತಿಂಗಳ ಒಳಗೆ ಸಾಲ ಮರುಪಾವತಿ ಮಾಡಬೇಕೆಂದು ಸಾಲ ಮಂಜೂರು ಆಗಿರುತ್ತದೆ. ಹಣವನ್ನು ಅವರ ಖಾತೆಗೆ

ವರ್ಗಾಯಿಸಿರುತ್ತೇವೆ. ಖಾತೆಗೆ ಹಣವನ್ನು ವರ್ಗಾಯಿಸಿದ ಬಗ್ಗೆ ನಮ್ಮ ಸೊಸೈಟಿಯಲ್ಲಿ ದಾಖಲೆಗಳು ಇರುತ್ತವೆ. ಸಾಲದ ದಾಖಲೆಗಳನ್ನು ಹಾಜರು ಪಡಿಸುತ್ತೀರಾ ಎಂದರೆ ಕೊಡುವ ಎಂದು ನುಡಿಯುತ್ತಾರೆ. ಮಂಜುನಾಥ ಭಟ್ ಎನ್ನುವವರು ಸೊಸೈಟಿಯ ಮೆಂಬರ್, ಅವರ ಪರಿಚಯ ಇರುತ್ತದೆ. ಹಣವನ್ನು ಆರೋಪಿತನಿಗೆ ಕೊಟ್ಟಿರುತ್ತೇವೆ. ಮಂಜುನಾಥ ಭಟ್ ರವರದು ಸಹ ಸಾಲ ಕೊಡುವುದು ಬಾಕಿ ಇರುತ್ತದೆ. ಆರೋಪಿಗೆ ಕೊಟ್ಟಿದ್ದೇನೆ ಎಂದು ಹೇಳುವಂತಹ ಹಣವನ್ನು ಮಂಜುನಾಥ ಭಟ್ ರವರ ತೆಕ್ಕಟ್ಟೆಯಲ್ಲಿರುವ ಸಾಲದ ಖಾತೆಗೆ ವರ್ಗಾಯಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

4. 5,10,000/ ಹಣವನ್ನು ಆರೋಪಿತ ಖಾತೆಗೆ ಹಾಕಿದ್ದಿಲ್ಲ ಹಾಗೂ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ದಿನಾಂಕ 31-03 ಕ್ಕೆ ರಂದು ಹಣ ಪಾವತಿ ಆಗಿದೆ ಅಂತ ಕಂಡು ಬಂದಿದ್ದರೆ ಬೋನಸ್ ಹಣ ಕೊಡುತ್ತೀರಾ ಎಂದರೆ ಸಾಕ್ಷಿ ನಮ್ಮಲ್ಲಿ ಆ ರೀತಿ ಕ್ರಮ ಇರುವುದಿಲ್ಲ ಎಂದು ನುಡಿಯುತ್ತಾರೆ. ಲೋನ್ ರಿಕವರಿ ಆದರೆ ಪ್ರಾಫಿಟ್ ಹಣವನ್ನು ತೋರಿಸಬಹುದು ಎಂದರೆ ಸಾಕ್ಷಿ ನಾವು ತೋರಿಸುವುದಿಲ್ಲ ಎಂದು ನುಡಿಯುತ್ತಾರೆ. ಆಡಿಟ್ ರವರು ಈ ಬಗ್ಗೆ ಡಿವಿಡೆಂಟ್ ಕೊಡುತ್ತಾರೆ ಎಂದು ನುಡಿಯುತ್ತಾರೆ. ಆರೋಪಿಗೆ ಕೊಟ್ಟಂತಹ ಸಾಲದ ಅರ್ಜಿಗಳು ಇರುವುದಿಲ್ಲ, ಇದೆಲ್ಲಾ ಅಕೌಂಟ್ ಅಡ್ಜಸ್ಟಮೆಂಟ್ ಇರುತ್ತದೆ ಎಂದರೆ ಸಾಕ್ಷಿ ನಾವು ಎಲ್ಲಾ ದಾಖಲೆಗಳನ್ನು ಪಡೆದುಕೊಂಡು ಕಾನೂನು ಪ್ರಕಾರ ದೂರು ಸಲ್ಲಿಸುತ್ತೇವೆ ಎಂದು ನುಡಿಯುತ್ತಾರೆ. ಆರೊಜೀಪಿತ ವಿರುದ್ಧ ಕೋ-ಆಪರೇಟಿವ್ ಸೊಸೈಟಿಯ ಕಾಯಿದೆ ಅಡಿ ಪ್ರಕರಣ ಸಲ್ಲಿಸಿರುವುದಿಲ್ಲ. ಆರೋಪಿಗೆ ಕೊಟ್ಟಂತಹ ಸಾಲ ಓವರ್ ಡ್ಯೂ ಆಗಿರುತ್ತದೆ. ಓವರ್ ಡ್ಯೂ ಆದಂತಹ ಹಣವನ್ನು ರಿಕವರಿ ಮಾಡುವಂತಹ ಜವಬ್ದಾರಿ ಬ್ರಾಂಚ್ ಮಾನ್ಯೇಜರ್ ಗೆ ಇರುತ್ತದೆ ಎಂದರೆ ಸರಿ. ಬ್ರಾಂಜ್ ಮ್ಯಾನೇಜರ್ ಕೋ-ಆಪರೇಟಿವ್ ಸೊಸೈಟಿ ಕಾಯಿದೆಯಡಿ ಪ್ರಕರಣ ಸಲ್ಲಿಸಬೇಕಾಗುತ್ತದೆ ಎಂದರೆ ಸರಿ. ಆರೋಪಿತನನ್ನು ಸೊಸೈಟಿಯಲ್ಲಿ ಸದಸ್ಯನಾಗಿ ಮಾಡಿಕೊಂಡಾಗ ಚೆಕ್ ನ್ನು ತೆಗೆದುಕೊಂಡಿದ್ದೇವೆ ಎಂದರೆ ಸರಿ. ಆ ಚೆಕ್ ನ್ನು ಈ ಪ್ರಕರಣದಲ್ಲಿ ಸಲ್ಲಿಸಿರುತ್ತೇವೆ ಎಂದರೆ ಸರಿ.

5. ಪಿರ್ಯಾದಿಯಲ್ಲಿ ಹೇಳುವಂತಹ ಬ್ಯಾಂಕ್‌ಗೆ ಸಲ್ಲಬೇಕಾದ ಬಾಕಿ ಸಾಲದ ಮೊತ್ತದ ಬಾಬ್ತು ಚೆಕ್ ನ್ನು ನೀಡಿದ್ದಲ್ಲ ಹಾಗೂ ಅವನು ನಮ್ಮ ಬ್ಯಾಂಕ್‌ಗೆ ಯಾವುದೇ ಬಾಬ್ತು ಹಣ ಕೊಡುವುದು ಬಾಕಿ ಇರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ತಪ್ಪನ್ನು ಮರೆಮಾಚುವ ಉದ್ದೇಶದಿಂದ ಕೋರ್ಟಿಗೆ ಆರೋಪಿತ ವಿರುದ್ಧ ದೂರು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ನಾವು ಅವನಿಗೆ ಯಾವುದೇ ಹಣವನ್ನು ಸಂದಾಯ ಮಾಡಿಲ್ಲ ಹಾಗೂ ಅವನು ಯಾವುದೇ ಹಣವನ್ನು ಕೊಡಲು ಭಾಧ್ಯಸ್ಥನಲ್ಲ ಎಂದರೆ ಸರಿಯಲ್ಲ. ಆರೋಪಿತನ ಲೋನ ಎಕ್ಸ್ಟ್ರಾಕ್ಟ್ ಹಾಜರು

ಪಡಿಸಿದರೆ ಸತ್ಯ  ವಿಚಾರ ಹೊರಗೆ ಬರುತ್ತದೆ ಎಂದು ಸದರಿ ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ದೂರು ಸಲ್ಲಿಸಲು ನನಗೆ ಯಾವುದೇ ಅರ್ಹತೆ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ - ಇಲ್ಲ.

ಓ.ಹೇ.ಕೇ.ಸ.ಇದೆ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ